ಸಾಧನೆಗೆ ವಿಜ್ಞಾನ, ಶ್ರೇಯಸ್ಸಿನ ಸಾಧನೆಗೆ ಕಲೆ ನೆರವಾಗುತ್ತವೆ." ಆದ್ದರಿಂದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಮಾಜ ವಿಜ್ಞಾನವನ್ನೂ, ಕಲಾ ವಿದ್ಯಾರ್ಥಿಗಳು ಸಾಮಾನ್ಯ ವಿಜ್ಞಾನವನ್ನೂ ಅಭ್ಯಸಿಸಬೇಕೆಂಬುದು ಕುವೆಂಪು ಅವರ ಅಭಿಮತ.

### ವಿದ್ಯೆಯ ಸ್ವರೂಪ

ವಿಶ್ವವಿದ್ಯಾನಿಲಯಗಳ ಕರ್ತವ್ಯ ಹಾಗೂ ವಿಶ್ವವಿದ್ಯೆಯ ಸ್ವರೂಪಗಳ ಬಗೆಗೆ ಕುವೆಂಪು ಅನೇಕ ಕಡೆ ವಿಚಾರ ಮಾಡಿದ್ದಾರೆ. "ವಿಶ್ವವಿದ್ಯಾನಿಲಯಗಳು ದೇಶದ ಪುರೋಗಮನದ ಮೋಟಾರು ಕಾರಿನ ಮುಂದಿನ ದೀಪಗಳಿದ್ದ ಹಾಗೆ" ಎಂಬುದು ಅವರ ನಂಬಿಕೆ. ವಿಶ್ವವಿದ್ಯಾನಿಲಯಗಳಿಂದ ವಿಶ್ವವಿದ್ಯೆ ಲಭಿಸಬೇಕು; ಅದರಿಂದ ವಿಶ್ವಪ್ರಜ್ಞೆ ಸಿದ್ಧಿಸಬೇಕು; ಅದರಿಂದ ಮಾನವ ವಿಶ್ವಮಾನವನಾಗಬೇಕು ಎಂಬುದು ಅವರ ವಿಚಾರಲಹರಿ. "ವಿಶ್ವವಿದ್ಯೆ ಎಂದು ನಾವು ಯಾವುದನ್ನು ಕರೆಯುತ್ತೇವೆಯೋ – Education and culture that universities can give (ಅಂದರೆ ವಿಶ್ವವಿದ್ಯಾನಿಲಯಗಳು ನೀಡುವ ಶಿಕ್ಷಣ ಮತ್ತು ಸಂಸ್ಕೃತಿ) ಜನಸಾಮಾನ್ಯರಿಗೆಲ್ಲಾ ಬೆಳಕಾಗಬೇಕು. ಈ ವಿಶ್ವವಿದ್ಯೆಯಿಂದ ಜನತೆಯಲ್ಲಿ ವಿಶ್ವಪ್ರಜ್ಞೆ ಮೂಡಬೇಕು... ಜಗತ್ತೆಲ್ಲಾ ಒಂದಾಗುತ್ತಿರುವ ಈ ಸಮಯದಲ್ಲಿ, ಈ ವಿಶ್ವವಿದ್ಯೆ, ಅದರಿಂದ ಉಂಟಾಗುವ ವಿಶ್ವಪ್ರಜ್ಞೆ, ಅದರಿಂದ ಉಂಟಾಗುವ ವಿಶ್ವಮೈತ್ರಿ – ಇದು ಎಲ್ಲದಕ್ಕಿಂತಲೂ ಅತ್ಯಂತ ಅವಶ್ಯಕವಾಗಿದೆ. ಎಲ್ಲ ಶಕ್ತಿಗಳಿಗಿಂತಲೂ ಅತ್ಯಂತ ಅವಶ್ಯಕವಾಗಿರುವ ಶಕ್ತಿ, ನಮ್ಮ ಪ್ರಪಂಚವನ್ನು ಬದುಕಿಸುವ ಶಕ್ತಿ ಈ ವಿಶ್ವಮೈತ್ರಿ... ಅಂಥ ವಿಶ್ವಮೈತ್ರಿಯನ್ನು ಪಡೆದ ಮಾನವ ವಿಶ್ವಮಾನವ. ಇಂಥ ವಿಶ್ವಮಾನವನನ್ನು ಸೃಷ್ಟಿಸುವ ನಿಲಯಗಳೇ ವಿಶ್ವವಿದ್ಯಾನಿಲಯಗಳಾಗಬೇಕು. ಇದು ನಮ್ಮ ಆದರ್ಶ; ನಮ್ಮ ಗುರಿ." ಆದ್ದರಿಂದಲೇ, "ಇಂದು ವಿಶ್ವವಿದ್ಯಾನಿಲಯಗಳ ಗುರಿ ಸರಕಾರದ ಅಧಿಕಾರಿವರ್ಗವನ್ನು ತಯಾರಿಸುವುದಕ್ಕೆ ಮಾತ್ರವೇ ಅಲ್ಲ, ಇನ್ನೂ ಮಹತ್ತಾದುದು." ಒಂದೆಡೆ ಕುವೆಂಪು ಹೀಗೆ ನುಡಿಯುತ್ತಾರೆ: "ವಿಶ್ವವಿದ್ಯಾನಿಲಯವೆಂದರೆ ಬರಿಯ ಕಾರ್ಯಸೌಧವೇನಲ್ಲವಲ್ಲ; ವಾಸ್ತವವಾಗಿ ಕಾಲೇಜುಗಳೇ." ವಸ್ತುತಃ ಕಾಲೇಜುಗಳು ಕೂಡ ವಿದ್ಯೆಯಲ್ಲ; ಅವು ನಿಮಿತ್ತವಷ್ಟೆ.

ಇಂದು ಕಾಲೇಜುಗಳು ಪದವೀಧರರನ್ನು ತಯಾರಿಸಿ ಹೊರಹಾಕುವ ಕಾರ್ಖಾನೆಗಳಾಗಿಬಿಟ್ಟಿವೆ; ಇದರಿಂದ ನಿರುದ್ಯೋಗ ಸಮಸ್ಯೆ ಮುಗಿಲು ಮುಟ್ಟಿದೆ. ಇದಕ್ಕೆ ಮದ್ದೇನು? "ಡಿಗ್ರಿಗಳ ವ್ಯಾಮೋಹವನ್ನು ಹೋಗಲಾಡಿಸುವುದು ದೇಶಕ್ಷೇಮದ ಹೊಣೆಗಾರಿಕೆಯನ್ನು ಹೊತ್ತ ಸರ್ವರ ಕರ್ತವ್ಯ." "ಸ್ವತಂತ್ರವಾದ ದೇಶದಲ್ಲಿ ಯಾವ ವೃತ್ತಿಯೂ ಮೇಲಲ್ಲ, ಯಾವುದೂ ಕೀಳಲ್ಲ" ಎಂಬ ಮನೋಭಾವ ಬೆಳೆಯಬೇಕು. ಅಷ್ಟೇ ಅಲ್ಲ, "ವಿದ್ಯಾಭ್ಯಾಸ ಮಾಡಲು ಹೋದ ಹಳ್ಳಿಯವರು ಮತ್ತೆ ಹಳ್ಳಿಗೆ ಬಂದು ನೆಲಸುವಂತಾಗಬೇಕು" ಎನ್ನುವ ಕುವೆಂಪು, ಅದಕ್ಕೆ ಹೀಗೆ ವಿವರಣೆ ಕೊಡುತ್ತಾರೆ: "ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಅವರು ಕೈಗೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿಮೆ 'ಉತ್ಪತ್ತಿಕಾರಕ' ವಾಗಿರುವುದಿಲ್ಲ, 'ಸಂಗ್ರಹಕಾರಕ'ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ

> **ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ. ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯೂ ಒಬ್ಬ ಗೌರವ ತಪಸ್ವಿ. ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿ ಸಂಗ್ರಹದ ಕಾಲ. ಬುದ್ಧಿಯನ್ನು ಮಸೆದು, ಭಾವವನ್ನು ಕಡೆದು, ಕವಿಗಳ ಕಾವ್ಯಗಳಲ್ಲಿಯೂ ತತ್ತ್ವಜ್ಞರ ದರ್ಶನಗಳಲ್ಲಿಯೂ, ವೈಜ್ಞಾನಿಕ ಸಂಶೋಧನೆಗಳಲ್ಲಿಯೂ, ರಾಷ್ಟ್ರರಚನಾ ಸಮರ್ಥ ರಾಜಕೀಯ ಶಾಸ್ತ್ರಗಳಲ್ಲಿಯೂ ಮನಸ್ಸನ್ನು ಹದಗೊಳಿಸಿ, ಚಿರಕಾಲವೂ ಶ್ರೇಯಸ್ಕರವಾದ ಸಂಸ್ಕೃತಿಯ ದೇವತೆಯನ್ನು ರಚಿಸಿ, ಆಕೆಯನ್ನು ಮನೋಮಂದಿರದಲ್ಲಿ ಸ್ಥಾಪಿಸಲು ಬದ್ಧಕಂಕಣರಾಗಿ ಬಂದಿರುವ ನೀವು, ಅಂತಹ ಇಚ್ಛೆಯಾಗಲಿ ಶಕ್ತಿಯಾಗಲಿ ಇಲ್ಲದ ಇತರರಂತೆ, ಬಣ್ಣಗುಳ್ಳೆಯ ಹವ್ಯಾಸಗಳಲ್ಲಿ ಕಾಲಹರಣ ಮಾಡಬೇಡಿ.**
>
> –ವಿದ್ಯಾರ್ಥಿಗಳಿಗೆ ಕುವೆಂಪು ಅವರ ಬೋಧನೆ
> (ಆಧಾರ: *ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ*, ಪುಸ್ತಕ: ನಿರಂಕುಶಮತಿಗಳಾಗಿ)

ಎಲ್ಲರೂ ಎಷ್ಟು ಕಾಲ ತಾನೇ ಸಂಪತ್ತನ್ನು ಸೃಷ್ಟಿಸದೆ, ಸಂಗ್ರಹಿಸುತ್ತಲೇ ಹೋಗಲಾಗುತ್ತದೆ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತ ರುಚಿ ದೊರೆಯದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯೇ ನಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನೂ, 'ಆಧಿದೈವಿಕ ಮೌಢ್ಯ'ವನ್ನೂ 'ಆಧಿಭೌತಿಕ ಕಷ್ಟನಷ್ಟ'ಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಗೊಳ್ಳಬೇಕು."

ಪ್ರಚಲಿತ ಶಿಕ್ಷಣ 'ಉತ್ಪತ್ತಿಕಾರಕ' ಅರ್ಥಾತ್ ಸೃಜನಶೀಲವಾಗಿರುವುದಕ್ಕಿಂತ ಮಿಗಿಲಾಗಿ 'ಸಂಗ್ರಹಕಾರಕ'ವಾಗಿದೆಯೆಂಬ ಕುವೆಂಪು ಅವರ ಯಥಾರ್ಥ ಹೇಳಿಕೆಗೆ ಪೋಷಕವಾಗಿ, ಅವರೇ ಕೊಟ್ಟಿರುವ ಸ್ವಾರಸ್ಯದ ಹೋಲಿಕೆಯೊಂದನ್ನು ಗಮನಿಸಬಹುದು: "ಇಂದಿನ ವಿದ್ಯಾರ್ಥಿಗಳು ಬತ್ತ ಬೆಳೆಯುವ ಗದ್ದೆಗಳಾಗದೆ, ಬತ್ತ ತುಂಬಿಕೊಳ್ಳುವ ಚೀಲಗಳಾಗಿದ್ದಾರೆ!"

### ವಿದ್ಯಾರ್ಥಿಗಳಿಗೆ 'ಆತ್ಮಶ್ರೀ'

ವಿದ್ಯಾರ್ಥಿ 'ಆತ್ಮಶ್ರೀ'ಯನ್ನು ಸಂಪಾದಿಸಬೇಕು, 'ದರ್ಶನ'ವನ್ನು ಆರ್ಜಿಸಬೇಕು ಎಂದು ಕರೆ ಕೊಡುತ್ತಾರೆ, ಕುವೆಂಪು. **"ಆತ್ಮಶ್ರೀಯಿಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ!"** ಈ ದೃಷ್ಟಿಯಿಂದ ವಿದ್ಯಾರ್ಥಿ 'ನಿರಂಕುಶಮತಿ'ಯಾಗಬೇಕು ಮತ್ತು 'ಮತಿಗೌರವ'ವುಳ್ಳವನಾಗಿರಬೇಕು ಎಂಬುದು ಅವರ ವಿಚಾರಧಾರೆ. "ಸಂಯಮಪೂರ್ಣವಾದ ಬುದ್ಧಿಸ್ವಾತಂತ್ರ್ಯವೇ ನಿರಂಕುಶಮತಿ" ಎನ್ನುತ್ತಾರೆ ಕುವೆಂಪು. ಅದಕ್ಕೆ ಅವರು ನೀಡುವ ವಿವರಣೆ ಹೀಗಿದೆ: "ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರನಿಂದೆ." ಇನ್ನು, 'ಮತಿಗೌರವ' ಎಂದರೇನು? "ಗುರಿಯ ಹಿರಿಮೆ, ಉದ್ದೇಶದ ಶ್ರೇಷ್ಠತೆ, ಪ್ರಯತ್ನದ ಪರಿಶುದ್ಧತೆ, ಸಾಧನದ ಸಾಹಸ, ಇಷ್ಟಸಿದ್ಧಿಗಾಗಿ ಮಾಡುವ ತ್ಯಾಗ

> ವಿದ್ಯೆಯು ಆತ್ಮಶ್ರೀಯಿಂದ ಪ್ರದೀಪ್ತವಾದರೆ, ಅದು ನಿಜವಾಗಿಯೂ ವಿದ್ಯೆಯಾಗುತ್ತದೆ. ಇಲ್ಲದಿದ್ದರೆ ಅದು ಎಷ್ಟು ಅಕ್ಷರಗಳ ಪದವಿಗೆ ಬೇಕಾದರೂ ಏರಲಿ, 'ಅವಿದ್ಯೆ' ಎನಿಸಿಕೊಳ್ಳುತ್ತದೆ.
>
> – ಕುವೆಂಪು

ಮತ್ತು ಕೈಗೊಳ್ಳುವ ತಪಸ್ಸು, ಶ್ರೇಯಃಪೂರ್ಣವಾದ ಚಿರಕಾಲಿಕಕ್ಕಾಗಿ ರುಚಿಕರವಾದ ತಾತ್ಕಾಲಿಕವನ್ನು ವಿಸರ್ಜಿಸುವ ವಿಚಾರಶಕ್ತಿ ಮತ್ತು ವಜ್ರದೃಢತೆ ಇತ್ಯಾದಿ ಗುಣಗಳೆಲ್ಲ ಧ್ವನಿಯಾಗುವಂತೆ 'ಮತಿಗೌರವ' ಎಂಬ ಪದವನ್ನು ಪ್ರಯೋಗಿಸಿದ್ದೇನೆ."

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಧ್ಯಾಪಕರು ಕೂಡ ವಿಚಾರಪರರಾಗಿ, ಸಮಾಜದ ಪರಿವರ್ತನೆಗೆ ಬದ್ಧಕಂಕಣರಾಗ ಬೇಕೆಂದು ಕುವೆಂಪು ಆಗ್ರಹಪೂರ್ವಕವಾಗಿ ನುಡಿಯುತ್ತಾರೆ: "ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು."

**ಶಿಕ್ಷಣವ್ಯವಸ್ಥೆಯಲ್ಲಿ ಭಾಷೆಯ ಪಾತ್ರ**

ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ ಭಾಷೆಯ ಪಾತ್ರವನ್ನು ಕುರಿತು ಕುವೆಂಪು ಹೊರಪಡಿಸಿರುವ ವಿಚಾರಗಳು ಬಹು ಮೌಲಿಕವಾಗಿವೆ. ಮಾತೃಭಾಷೆಯೇ ಶಿಕ್ಷಣದ ಮತ್ತು ಜ್ಞಾನಪ್ರಸಾರದ ಮಾಧ್ಯಮವಾಗ ಬೇಕು ಎಂಬುದು ಕುವೆಂಪು ಅವರ ಸುದೃಢವಾದ ನಿಲುವು. ಅವರು ಪುನಃ ಪುನಃ ಘೋಷಿಸುತ್ತಾರೆ: "ವಿಶ್ವವಿದ್ಯಾನಿಲಯದ ಜ್ಞಾನಸಾರ ಜನಸಾಮಾನ್ಯರಲ್ಲಿ ಪ್ರಸಾರಗೊಳ್ಳಬೇಕು. ಸಾಮಾನ್ಯವಾಗಿ, ನಮಗೆ ತಿಳಿದಿರುವ ಜ್ಞಾನ ಜನಸಾಮಾನ್ಯರಿಗೆ ತಿಳಿಯಬೇಕಾದರೆ ಆಯಾ ನಾಡುಗಳು ಆಯಾ ನುಡಿಯಿಂದಲೇ ಅದನ್ನು ಗೊತ್ತುಮಾಡಿಕೊಳ್ಳಬೇಕು"; "(ಜ್ಞಾನ) ಗಂಗೆ ನಮ್ಮ ನೆಲದಲ್ಲೇ ಹರಿದುಬರಬೇಕಾಗುತ್ತದೆ"; "ದೇಶಭಾಷೆಗೆ ಪ್ರಥಮ ಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು"; "ಆಯಾ ವಿಶ್ವವಿದ್ಯಾನಿಲಯದ ಸುತ್ತಮುತ್ತಣ ಪ್ರದೇಶದಲ್ಲಿ ರೂಢಿಯಲ್ಲಿರುವ ಭಾಷೆ ಶಿಕ್ಷಣಮಾಧ್ಯಮವಾಗಿರತಕ್ಕದ್ದು ಸಹಜ, ಸೂಕ್ತ. ಇದರಿಂದ ವಿಶ್ವವಿದ್ಯಾನಿಲಯದ ಜ್ಞಾನ ಜನತಾಂತರ್ಗತವಾಗಲೂ ಜನತಾ ಶಕ್ತಿ ವಿಶ್ವವಿದ್ಯಾನಿಲಯದೊಳಗೆ ಪ್ರವಹಿಸಲೂ, ಆ ಮೂಲಕ ವಿಶ್ವವಿದ್ಯಾನಿಲಯಕ್ಕೂ ಜನತೆಗೂ ನಿಕಟವೂ ಗಾಢವೂ ಆದ ಸಂಪರ್ಕ ಏರ್ಪಟ್ಟು, ಅಖಂಡ ಪರಿಪೂರ್ಣತೆಯನ್ನು ಸಾಧಿಸಲೂ ಅನುಕೂಲವಾಗುತ್ತದೆ." ಈ ನಿಲುವು ಶಿಕ್ಷಣತತ್ತ್ವಕ್ಕೆ ಅನುಸಾರ ವಾದುದು ಎಂದೂ ಸಮರ್ಥಿಸುತ್ತಾರೆ, ಕುವೆಂಪು.

ಕುವೆಂಪು ಅವರಿಗೆ ಇಂಗ್ಲಿಷಿನ ಬಗೆಗೆ ದ್ವೇಷವಾಗಲಿ ತಿರಸ್ಕಾರವಾಗಲಿ ಎಳ್ಳಷ್ಟೂ ಇರಲಿಲ್ಲ. ಆದರೆ ಬಲಾತ್ಕಾರದ ಇಂಗ್ಲಿಷನ್ನು ಅವರು "ಪ್ರಚ್ಛನ್ನ ಭ್ರಷ್ಟಾಚಾರ" ಎಂದು ಖಂಡಿಸುತ್ತಾರೆ; ಅದು ಎಲ್ಲರಿಗೂ ಅಗತ್ಯವಲ್ಲ ಎಂದು ಒತ್ತಿ ನುಡಿಯುತ್ತಾರೆ. ಅವರ ಕಟೂಕ್ತಿಯಿದು: "ಈ ನಾಟಕ–ದುರಂತನಾಟಕ–ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ ನೀರು ನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆ ಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ; ಹಲವರಿಗೆ ಕೊಂಚಮಟ್ಟಿಗೆ ಬೇಕು; ಕೆಲವರಿಗೆ ಮಾತ್ರ ಚೆನ್ನಾಗಿಯೇ ಬೇಕು." ಇಂಗ್ಲಿಷ್ ಸಾಹಿತ್ಯವನ್ನು ಕನ್ನಡದ ಮೂಲಕ ಬೋಧಿಸಬೇಕು, ವಿದ್ಯಾರ್ಥಿಗಳು ಇಂಗ್ಲಿಷ್ ಪ್ರಶ್ನೆಪತ್ರಿಕೆಯನ್ನು ಕನ್ನಡದಲ್ಲಿ ಉತ್ತರಿಸುವ ಅವಕಾಶವಿರಬೇಕು ಎಂದು ವಾದಿಸುತ್ತಾರೆ, ಕುವೆಂಪು. ಈಗಾಗಲೇ ಇಳಿದುಹೋಗಿರುವ ಇಂಗ್ಲಿಷಿನ ಮಟ್ಟ ಮುಂದೆ ಉತ್ತಮಗೊಳ್ಳುವ ಸಂಭವವೇ ಇಲ್ಲ ಎಂಬುದನ್ನು ಅವರು ತಿಳಿಸುವ ರೀತಿ ಪ್ರಖರ ಪರಿಣಾಮಕಾರಿಯಾಗಿದೆ: "ನಮ್ಮ ದೇಶದಲ್ಲಿ ನಡೆಯುತ್ತಿರುವ ಎಲ್ಲ ಕಾರ್ಖಾನೆ ಆಣೆಕಟ್ಟುಗಳ ಕೆಲಸ ಕಾರ್ಯಗಳನ್ನು ನಿಲ್ಲಿಸಿ, ಅದರಿಂದ ಉಳಿತಾಯವಾಗುವ ಎಲ್ಲ ಸಂಪತ್ತನ್ನೂ ಇಂಗ್ಲಿಷ್ ವಿದ್ಯಾಭ್ಯಾಸದ ಮಟ್ಟವನ್ನು ಏರಿಸಲು ವಿನಿಯೋಗಿಸಿದರೂ, ಇನ್ನೂ ಕೋಟ್ಯಂತರ ರೂಪಾಯಿಗಳನ್ನು ಸುರಿದರೂ, ಇನ್ನೂ ನೂರು ವರ್ಷಗಳ ಕಾಲ ಸತತವಾಗಿ ದುಡಿದರೂ, ಇಂಗ್ಲಿಷ್ ಭಾಷಾಜ್ಞಾನ ನಮ್ಮ ವಿದ್ಯಾರ್ಥಿಗಳಲ್ಲಿ ಈಗಿರುವುದಕ್ಕಿಂತಲೂ ಹೆಚ್ಚೇನೂ ಉತ್ತಮವಾಗುವುದಿಲ್ಲವೆಂದು ಖಚಿತವಾಗಿ ಹೇಳುತ್ತೇನೆ."

ಈ ಎಚ್ಚರಿಕೆಯ ಉಕ್ತಿಯೂ ಗಮನಾರ್ಹ: "ಇಂಗ್ಲಿಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸ ಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸ ಲಾಗದೆ ನಿತ್ಯರೋಗಿಯಂತಿರಬೇಕಾಗುತ್ತದೆ."

ಸಾಹಿತ್ಯದಲ್ಲಾಗಲಿ, ವಿಜ್ಞಾನದಲ್ಲಾಗಲಿ ಒಳ್ಳೆಯ ಕೆಲಸ ಮಾಡಬಯಸುವವರಿಗೆ ಮೂರು ಭಾಷೆಗಳ ಸಮರ್ಪಕ ಪರಿಚಯ ಅತ್ಯವಶ್ಯಕ ಎನ್ನುತ್ತಾರೆ, ಕುವೆಂಪು: "ಮೊದಲನೆಯದಾಗಿ ಪ್ರಾದೇಶಿಕ ಭಾಷೆ ಅಂದರೆ ನಮ್ಮ ಕನ್ನಡ. ಎರಡನೆಯದಾಗಿ ಅಂತರರಾಷ್ಟ್ರೀಯವಾಗಿ ಸಮಸ್ತ ತಿಳುವಳಿಕೆಯ ಭಂಡಾರಕ್ಕೂ ಗವಾಕ್ಷವನ್ನು ತೆರೆಯುವ ಇಂಗ್ಲಿಷ್. ಮೂರನೆಯದಾಗಿ ಭಾರತೀಯ ತತ್ತ್ವಶಾಸ್ತ್ರ ಸಾಹಿತ್ಯಾದಿ ವಿಚಾರಗಳನ್ನು ಅರಿಯಲು ಸಾಧಕವಾದ ಸಂಸ್ಕೃತ."

ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿಯುವುದು ಶ್ರೇಯಸ್ಕರ ಮತ್ತು ಲಾಭದಾಯಕ ಎಂಬುದು ಕುವೆಂಪು ಅವರ ಧೋರಣೆ. "ನಮ್ಮ ವಿದ್ವಾಂಸರು ಒಂದೇ ಭಾಷೆ ಕಲಿತರೆ ಸಾಕಾಗುವುದಿಲ್ಲ. ಇಂಗ್ಲಿಷ್ ಇರುತ್ತದೆ; ಆದರೆ ಅದರ ಜೊತೆಗೆ ರಷ್ಯನ್, ಜರ್ಮನ್, ಚೈನೀ ಭಾಷೆಗಳೂ ನಮ್ಮ ಜ್ಞಾನಗಂಗಾಪಾತ್ರಗಳಾದಾವು."

ಮಹಾಕವಿಯ ನಿರ್ಣಾಯಕ, ಸಾರಭೂತ ಸಂದೇಶವಿದು: "ಎಲ್ಲಾ ಭಾಷೆಗಳೂ ನಮಗೆ ಮಾನ್ಯ. ಆದರೆ ಕಟ್ಟಡ ಕಟ್ಟಬೇಕಾದರೆ ನಮ್ಮ ಭಾಷೆಯಿಂದಲೇ ಕಟ್ಟಡ ಕಟ್ಟಿ. ಅದು ಗಟ್ಟಿ."

ಕುವೆಂಪು ಅವರ ವಿದ್ಯಾವಿಚಾರಗಳು ಗಟ್ಟಿಯಾಗಿವೆ. ಅವುಗಳಲ್ಲಿ ಪೂರ್ಣತೆಯಿದೆ; ಪೂರ್ಣಮಾನವನನ್ನು ರೂಪಿಸುವುದೇ ಅವುಗಳ ಉದ್ದೇಶವಾಗಿದೆ. ★

# ಬಸವಣ್ಣನವರ ವಚನಗಳಲ್ಲಿ 'ನೈತಿಕ ಶಿಕ್ಷಣ'

ಡಾ.ರಾಜಶೇಖರ ಜಮದಂಡಿ

**ನಮ್ಮ ಕರ್ನಾಟಕ ಸಂಸ್ಕೃತಿಯ ಆಕರಗಳಾದ ಜನಪದ ಗೀತೆಗಳು, ಶರಣರ ವಚನಗಳು, ದಾಸರ ಪದಗಳು ಮುಂತಾದವುಗಳನ್ನು ಮಕ್ಕಳಿಗೆ ನೀತಿಬೋಧನೆ ಮಾಡಲು ಸಮರ್ಥವಾಗಿ ಬಳಸಿಕೊಳ್ಳಬಹುದು. ಇದಕ್ಕೆ ಉತ್ತಮ ನಿದರ್ಶನಗಳಾಗಿರುವ ಬಸವಣ್ಣನವರ ವಚನಗಳಲ್ಲಿನ ಒಳಿತು-ಕೆಡುಕುಗಳ ವಿಚಾರವನ್ನು ಸಮರ್ಥವಾಗಿ ಬಿಂಬಿಸಿರುವ ಲೇಖಕರು ಚಾಮರಾಜನಗರದ ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಾಪಕರು.**

೧೨ನೇ ಶತಮಾನದ ಶಿವಶರಣರ ಬದುಕು ಬಹುಮುಖಿಯಾದುದು. ಶರಣರ ಸತ್ವಯುತ ವಚನಗಳು ಮಾನವೀಯ ವ್ಯಕ್ತಿತ್ವದ ಪ್ರಾಮಾಣಿಕ ಪ್ರತಿಬಿಂಬಗಳಾಗಿವೆ. ಮಾನವನಾದವನು ದಿನನಿತ್ಯದ ಬದುಕಿನಲ್ಲಿ ಹೇಗೆ ವರ್ತಿಸಬೇಕು? ಎಂತಹ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು? ಎನ್ನುವುದನ್ನು ಆ ವಚನಗಳು ಬೋಧಿಸುತ್ತವೆ. ಬದುಕಿನ ಸಾರ್ಥಕತೆಗೆ ಪೂರಕವಾದ ಕಾಯಕ, ದಾಸೋಹ, ನಿರಹಂಕಾರ, ಭಾವಶುದ್ಧಿ, ನುಡಿದಂತೆ ನಡೆವ ನಿಲುವು ಮೊದಲಾದ ವಿಶಿಷ್ಟ ಗುಣಗಳಿಗೆ ಪಾತ್ರರಾಗಬೇಕಾದರೆ, ಮುಖ್ಯವಾಗಿ ಸದ್ಗುಣಗಳು ಅಥವಾ ಸಜ್ಜನರ ಸಂಗ ತುಂಬಾ ಅವಶ್ಯಕ ಎಂಬುದು ಶರಣರ ನಿಲುವಾಗಿತ್ತು.



ಹುಟ್ಟುಗುಣಗಳಲ್ಲಿಯೇ ಕೊನೆಯವರೆಗೆ ಬಾಳುವವನು ಕೇವಲ ಮಾನವ, ಒಳ್ಳೆಯ ಸಂಸ್ಕಾರ ಗುಣಗಳೊಂದಿಗೆ ಬಾಳುವವನು ಮಹಾಮಾನವ, ಸಜ್ಜನಸಂಗದೊಡನೆ ಸಮಷ್ಟಿ ಪ್ರಜ್ಞೆಯನ್ನು ಬೆಳೆಸಿಕೊಂಡು, ನಿಸ್ವಾರ್ಥದಿಂದ ಬಾಳುವವನು ದೇವಮಾನವ. ಸಾಮಾನ್ಯ ಮಾನವನು ಹೀಗೆ ಹಂತ ಹಂತವಾಗಿ ಮೇಲಕ್ಕೇರಿ, ಜೀವನವನ್ನು ಪರಮಪಾವನವನ್ನಾಗಿ ಮಾಡಿಕೊಳ್ಳುವುದು ತುಂಬಾ ಮೌಲಿಕವಾದುದು ಎಂದು ಶರಣರು ನಂಬಿದ್ದರು.

ಈ ಹಿನ್ನೆಲೆಯಲ್ಲಿ ಬಸವಣ್ಣನವರು ಶಿಸ್ತು, ಸಂಯಮ, ವಿನಯ, ನಿಯಮಪಾಲನೆ, ಸ್ವಚ್ಛತೆ, ಪ್ರಾಮಾಣಿಕತೆ, ಮಾನವೀಯತೆ ಮತ್ತು ಸಮಾನತೆಗಳೇ ಲಕ್ಷಣಗಳಾಗಿರುವ ಸಜ್ಜನಿಕೆಯನ್ನು ಬಾಲ್ಯದಿಂದಲೇ ತಮ್ಮ ಜೀವನದಲ್ಲಿ ರೂಢಿಸಿಕೊಂಡವರು; ಇತರರಿಗೂ ಆ ರೀತಿಯನ್ನು ಬೋಧಿಸುತ್ತಾ ಬಂದವರು. ಹೀಗಾಗಿ ಬಸವಣ್ಣನವರನ್ನು, **"ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ; ಚೆಲ್ಲಿದನು ತಂದು ಶಿವಬೆಳಕ, ನಾಡೊಳಗೆ ಸೊಲ್ಲೆತ್ತಿ ಜನವು ಹಾಡುವುದು"** ಎಂದು ಸಾಮಾನ್ಯ ಪ್ರಜೆಗಳು ಕೂಡ ಕೊಂಡಾಡಿದರು. ಬುದ್ಧ ಆಸೆಯ ತ್ಯಾಗವನ್ನು, ಮಹಾವೀರನು ಅಹಿಂಸೆಯನ್ನು, ಕ್ರೈಸ್ತನು ಉದಾರತೆಯನ್ನು, ಮಹಮ್ಮದ್ ಪೈಗಂಬರನು ಸಹೋದರಭಾವವನ್ನೂ ಬೋಧಿಸಿದರೆ, ಅವುಗಳೆಲ್ಲದರ ಒಟ್ಟು ಸ್ವರೂಪಕ್ಕೆ ಬಸವಣ್ಣನವರು ಅಭಿವ್ಯಕ್ತಿಯಾಗಿದ್ದರು ಎಂದರೆ ಉತ್ಪ್ರೇಕ್ಷೆಯಾಗಲಾರದು.

ಸದ್ಭಾವ, ಸದಾಚಾರ, ಸದ್ಭಕ್ತಿಗಳ ಜೊತೆಗೆ ಸಜ್ಜನಿಕೆಯನ್ನೂ ಸೇರಿಸಿದ ಬಸವಣ್ಣನವರು ತಮ್ಮ ದಿಟ್ಟ ಹೊಸ ಹೆಜ್ಜೆಗಳನ್ನಿಟ್ಟ ಕಾಲ ಕ್ರಿ.ಶ. ೧೨ನೇ ಶತಮಾನ. ಆ ಕಾಲದಲ್ಲಿ ಜಾತಿಭೇದ, ಲಿಂಗಭೇದ, ವರ್ಗಭೇದ, ಮೂಢನಂಬಿಕೆಗಳು ಮತ್ತು ಹಿಂಸಾವೃತ್ತಿಗಳು ಅತಿಯಾಗಿದ್ದವು. ಅನುಚಿತವಾದ ಅಧಿಕಾರವನ್ನು ಪಡೆದು ಅಟ್ಟಹಾಸ ಮಾಡುತ್ತಿದ್ದ ಪುರೋಹಿತ ವರ್ಗದವರ ದರ್ಪ ಹೆಚ್ಚಾಗಿತ್ತು. ಪಂಡಿತರು ತಮ್ಮ ಒಣ ಪಾಂಡಿತ್ಯದ ಪ್ರತಿಷ್ಠೆಯನ್ನು ಮೆರೆಯುವಲ್ಲಿ ನಿರತರಾಗಿದ್ದರು. ದುರ್ನಡತೆಯ ತಳಹದಿಯ ಮೇಲೆ ಸಮಾಜದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿದ್ದವು. "ಮಾತಿನಂತೆ ಮನವಿಲ್ಲದ, ನೀತಿಯಂತೆ ನಿಜವಿಲ್ಲದ" ದುರ್ಜನರ ಪ್ರಾಬಲ್ಯ ಹೆಚ್ಚಾಗಿತ್ತು. ಇದರಿಂದ ಸಜ್ಜನರ ನೈಜ 'ಧರ್ಮ'ವು ಅಧೋಗತಿಯ ಸ್ಥಿತಿಯಲ್ಲಿತ್ತು.

ಇಂಥ ಸಂಕ್ಲಿಷ್ಟ ವಾತಾವರಣವನ್ನು ಬಸವಣ್ಣನವರು ತಿಳಿಗೊಳಿಸಲು ಪ್ರಯತ್ನಿಸಿದರು. ಸಜ್ಜನರಲ್ಲಿಯೂ ಅಡಗಿದ್ದ ಕೆಲ ಅವಗುಣಗಳನ್ನು ಗುರುತಿಸಿ, ನಡೆನುಡಿಗಳಲ್ಲಿ ಅಂತರವಿರಬಾರದೆಂದು ತಿಳಿಹೇಳಿದರು. ಅದೇ ರೀತಿ ದುರ್ಜನರನ್ನು ಕಂಡಾಗ ಸಾಧ್ಯವಾದಷ್ಟು ತಿದ್ದಿ, ಸರಿದಾರಿಗೆ ತರಲು ಪ್ರಯತ್ನಿಸಿದರು. ಅಂಥವರ ನಡವಳಿಕೆಗಳಿಗೆ ಸದೃಶವಾದ ರೂಪಕಗಳನ್ನು ತಮ್ಮ ವಚನಗಳಲ್ಲಿ ನೀಡಿ, ಅವರ ಸ್ವಭಾವವನ್ನು ಬಯಲಿಗೆಳೆದರು. "ಸಮಾಜದಲ್ಲಿ ಸಕಲರಿಗೂ ಸಲ್ಲುವಂತೆ ಸಮತೂಕದ ಸನ್ನಡತೆಯಲ್ಲಿ ಸತ್‌ಪ್ರಜೆಗಳಾಗಿರಬೇಕು" ಎಂಬುದೇ ಬಸವಣ್ಣನವರ ಆತ್ಯಂತಿಕ ನಿಲುವಾಗಿತ್ತು.